**ದಿ.೧೪-೦೨-೨೦೨೨ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ೧ ನೇ ಮತ್ತು ೩ ನೇ ಪ್ರತಿವಾದಿ ಪರ ಶ್ರೀ.ಆರ್ ಸಿ ಎಸ್ ವಕೀಲರಿಂದ.**

ನನ್ನ ಮುತ್ತಜ್ಜನ ಹೆಸರು ರಂಗಪ್ಪ. ಅವರಿಗೆ ಇಬ್ಬರು ಮಕ್ಕಳಿದ್ದು, ಗವಿಯಪ್ಪ ಮತ್ತು ಹನುಮಂತಪ್ಪ ಆಗಿರುತ್ತಾರೆ. ಹನುಮಂತಪ್ಪನಿಗೆ ೪ ಗಂಡು ಮಕ್ಕಳು ಹಾಗೂ ೪ ಹೆಣ್ಣು ಮಕ್ಕಳು ಇರುತ್ತಾರೆ. ಈ ದಾವೆಯಲ್ಲಿ ಹನುಮಂತಪ್ಪ ನವರ ೪ ಗಂಡು ಮಕ್ಕಳನ್ನು ಪಾರ್ಟಿ ಮಾಡಿರುತ್ತೇವೆ. ಈ ದಾವೆಯಲ್ಲಿ ಹನುಮಂತಪ್ಪ ನವರ ೪ ಹೆಣ್ಣು ಮಕ್ಕಳನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿ. ನಮ್ಮ ಕುಟುಂಬದ ಮನೆತನವನ್ನು ಹನುಮಂತರಪ್ಪ ನೋಡಿಕೊಳ್ಳುತ್ತಿದ್ದರು. ನಮ್ಮ ಒಟ್ಟು ಕುಟುಂಬನ್ನು ಹನುಮಂತಪ್ಪನೆ ನೋಡಿಕೊಳ್ಳುತ್ತಿದ್ದು ಅದನ್ನು ನನ್ನ ಅಜ್ಜ ಗಜವಿಯಪ್ಪ ನೋಡಿಕೊಳ್ಳುತ್ತಿಲ್ಲ ಎಂದರೆ ಸರಿ. ನನ್ನ ಅಜ್ಜ ಗವಿಯಪ್ಪ ಯಾವಗಾ ಮರಣ ಹೊಂದಿದ್ದರು ಎಂದು ನನಗ ಗೊತ್ತಿಲ್ಲ.

೧ ನೇ ಪ್ರತಿವಾದಿಯ ಗಂಡನಿಗೆ ಹನುಮಂತಪ್ಪ ದಾವ ಆಸ್ತಿಯ ಐಟಂ ನಂ.೧ ಅನ್ನು ಮಾರಾಟ ಮಾಡಿದ್ದರೆ ಎಂದರೆ ಸರಿ. ಸಾಕ್ಷಿ ನಾವು ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನಿರ್ವಹಣೆ ಮಾಡಿದ್ದು ಹನುಮಂತಪ್ಪ ಎಂದರ ಸರಿ. ಐಟಂ ನಂ.೨,೩ ಮತ್ತು ೪ ಅನ್ನು ಮಹಾಲಿಂಗಪ್ಪ ಅವರಿಗೆ ಹನುಮಂತರಪ್ಪ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನಮ್ಮ ಆಸ್ತಿ ಮಾರಾಟ ಮಾಡಿಲ್ಲ ಹನುಮಂತಪ್ಪ ಮಾಡಿದ್ದರೆ ಎಂದು ನುಡಿಯುತ್ತಾರೆ. ದಾವ ಆಸ್ತಿಗಳು ಹನುಮಂತಪ್ಪನಿಗ ಸೇರಿದ ಆಸ್ತಿ ಎಂದರೆ ಸರಿ. ಐಟಂ ನಂ.೨,೩ ಮತ್ತು ೪ ಅನ್ನು ಮಹಾಲಿಂಗಪ್ಪ ನವರು

ಸಿದ್ದರಾಮಯ್ಯ ನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನಮ್ಮ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ಮಾರಾಟ ಮಾಡಿರುವ ಆಸ್ತಿಗಳ ಸ್ವಾಧೀನದಲ್ಲಿ ಖರೀದಿದಾರರು ಇದ್ದರೆ ಎಂದರೆ ಸಾಕ್ಷಿ ನಾವು ಅವರಿಗೆ ಗುತ್ತಿಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸುಮಾರು ೧೫-೨೦ ವರ್ಷದ ಹಿಂದೆ ನನ್ನ ತಂದೆ ಆಸ್ತಿಯನ್ನು ಕೇಳಲು ಹೋದಾಗ ಅದನ್ನು ಮಾರಾಟ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ.

ದಾವ ಆಸ್ತಿಗಳನ್ನು ಮನೆ ನಿರ್ವಹಣೆಗಾಗಿ ಎತ್ತಿನ ಗಾಡಿಗಳನ್ನು ಖರೀದಿಸಲು ಹನುಮಂತಪ್ಪ ಮಾರಾಟ ಮಾಡಿದ್ದಾರೆ ಎಂದರ ಸರಿಯಲ್ಲ. ನನಗೆ ಈಗ ४೫ ವರ್ಷ ಆಗಿದ್ದು, ದಾವ ಆಸ್ತಿಗಳನ್ನು ಮಾರಾಟ ಮಾಡಿದ್ದಾಗ ನನ್ನ ತಂದೆ ಇದ್ದು ಅದರ ಬಗ್ಗೆ ಅವರಿಗೆ ಮಾಹಿತಿ ಇದೆ. ದಾವ ಆಸ್ತಿಗಳ ಮಾರುಕಟ್ಟೆಯ ಬೆಲೆ ನನಗೆ ಗೊತ್ತಿಲ್ಲ. ದಾವ ಆಸ್ತಿಗಳು ಪ್ರತಿ ಗುಂಟೆಗೆ ೧೦-೧೫ ಲಕ್ಷ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.೨ ರಿಂದ ४ ಆಸ್ತಿ ಭೂ ಪರಿವರ್ತನೆ ಆಗಿದೆ ಎಂದರೆ ಸಾಕ್ಷಿ ಅವರು ಒಳಂದೊಳಗೆ ಆ ರೀತಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ತಂದೆ ಮತ್ತು ಅವರ ಕುಟುಂಬದವರು ಯಾವುದೇ ವಿಭಾಗವನ್ನು ಮಾಡಿಕೊಂಡಿರುವುದಿಲ್ಲ. ದಾವ ಆಸ್ತಿಯನ್ನು ಹೊರತುಪಡಿಸಿ ನಮಗೆ ೩ ಮತ್ತು ४ ಆಸ್ತಿಗಳು ಇದ್ದು ಅವುಗಳ ಪೈಕಿ ಒಂದು ಆಶ್ರಮ ರಸ್ತೆಯಲ್ಲಿ ಇನೊಂದು ಬುಕ್ಕಾಂಬುದಿ ರಸ್ತೆಯಲ್ಲಿ ಇರುತ್ತದೆ. ೧೯೯೫-೯೬ ರಲ್ಲಿ ನನ್ನ ತಂದೆ ಮತ್ತು ಹನುಮಂತಪ್ಪ ನವರ ಮಕ್ಕಳು ಬಸಣ್ಣ,ತಿಮ್ಮಪ್ಪ,ಗೋಪಲಪ್ಪ ಮತ್ತು ಚಂದ್ರಪ್ಪ ವಿಭಾಗ ಮಾಡಿಕೊಂಡಿದ್ದರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಗೂ ಕೂಡ ಈ ಬಗ್ಗೆ

ಪಿ.ಡಬ್ಲ್ಯೂ-೧.

ಮಾಹಿತಿ ಇಲ್ಲ. ದಾವ ಆಸ್ತಿಗಳ ಮೇಲೆ ಹನುಮಂತಪ್ಪ ಸಾಲ ಪಡೆದಿದ್ದಾರೆ ಎಂದರೆ ಸಾಕ್ಷಿ ನಾವು ಯಾವುದೇ ಸಾಲ ಪಡೆದಿಲ್ಲ ಹನುಮಂತಪ್ಪ ಮಾತ್ರ ಸಾಲ ಪಡೆದಿದ್ದರೆ ಎಂದು ನುಡಿಯುತ್ತಾರೆ. ದಾವ ಆಸ್ತಿ ಹೊರತು ಪಡಿಸಿ ಬೇರೆ ಆಸ್ತಿಯಲ್ಲಿ ನನ್ನ ತಂದೆ ಹೆಸರಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವ ಆಸ್ತಿಯ ಬಗ್ಗೆ ನನಗೆ ಖುದ್ದು ಮಾಹಿತಿ ಗೊತ್ತಿಲ್ಲ ಎಂದರೆ ಸರಿ. ದಾವ ಆಸ್ತಿಯ ಮಾರುಕಟ್ಟೆಯ ಬೆಲೆ ಹೆಚ್ಚಾಗಿದ್ದು ಅದಕ್ಕಾಗಿ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾಖಲಾತಿಯ ಬಗ್ಗೆ ಯಾವುದೇ ಖುದ್ದು ಮಾಹಿತಿ ಇಲ್ಲ ಹಾಗೂ ಯಾವೆಲ್ಲಾ ದಾಖಲಾತಿ ಇದೆ ಎಂದು ಮಾಹಿತಿ ನನಗೆ ಇಲ್ಲ ಎಂದರೆ ಸರಿ. ನಮ್ಮ ವಕೀಲರು ದಾದೆಯಲ್ಲಿ ಸಲ್ಲಿಸಿರುವ ಬಗ್ಗೆ ದಾಖಲಾತಿಯ ಬಗ್ಗೆ ಹೇಳಿರುತ್ತಾರೆ ಆದರೆ ನನಗೆ ಅದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ನನ್ನ ಸಾಕ್ಷ ಪ್ರಮಾಣ ಪತ್ರದ ಬಗ್ಗೆ ಮಾಹಿತಿಯನ್ನು ನನ್ನ ತಂದೆಯವರು ನೀಡಿರುತ್ತಾರೆ. ನನ್ನ ತಂದೆ ಮರಣ ಹೊಂದಿ ಸುಮಾರು ೩-೪ ವರ್ಷ ಆಗಿರುತ್ತದೆ. ಮನೆಯ ವ್ಯವಹಾರವನ್ನು ನಾನು ಈಗ ನೋಡಿಕೊಳ್ಳುತ್ತಿದ್ದರು. ಎಲ್ಲಾ ಮಾಹಿತಿಯನ್ನು ತಿಳಿದಿದ್ದರು ಸಹ ನಾನು ಅಕ್ರಮವಾಗಿ ಈ ಆಸ್ತಿಯನ್ನು ಪಡೆಯಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ. ಎ.ಸಿ ನ್ಯಾಯಾಲಯದಲ್ಲಿ ನಾವು ಖಾತೆ ರದ್ದು ಮಾಡಿ ಎಂದು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾವು

**ಪಿ.ಡಬ್ಲ್ಯೂ-೧.**

**ವಿಭಾಗ ಮಾಡಿಕೊಂಡ ಎಲ್ಲಾ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿ. ದಾವ ಆಸ್ತಿಯ ಸ್ವಾಧೀನಲ್ಲಿ ಓಂಕಾರಪ್ಪ,ಸಿದ್ದಮ್ಮ ಜೈ ಕೃಷ್ಣಮೂರ್ತಿ ಇದ್ದರೆ ಎಂದರ ಸರಿಯಲ್ಲ.**

**ಮರುವಿಚಾರಣೆ** ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.